# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಸದಸ್ಯರ ಹೆಸರು | : ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 1121 |
| ಉತ್ತರಿಸಬೇಕಾದ ದಿನಾಂಕ: | : 21.08.2025 |
| ಉತ್ತರಿಸುವ ಸಚಿವರು | : ಗೃಹ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಡೆಡ್ಲಿ ಆನ್‌ಲೈನ್ ಬೆಟ್ಟಿಂಗ್‌ಗೆ ಸಾಕಷ್ಟು ಯುವಜನರು ಪ್ರತಿನಿತ್ಯ ಆಹುತಿಯಾಗುತ್ತಿದ್ದು, ಹಲವರು ಆತ್ಮಹತ್ಯೆಗೆ ಶರಣಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ; |
| ಆ) | ಬಂದಿದ್ದಲ್ಲಿ, ಕಳೆದ ಮೂರು ವರ್ಷಗಳಲ್ಲಿ ಆನ್‌ಲೈನ್ ಬೆಟ್ಟಿಂಗ್ ಗೆ ಸಂಬಂಧಿಸಿದಂತೆ ಒಟ್ಟು ಎಷ್ಟು ಪ್ರಕರಣಗಳು ದಾಖಲಾಗಿವೆ? (ವರ್ಷವಾರು ವಿವರ ನೀಡುವುದು) | ಕಳೆದ ಮೂರು ವರ್ಷಗಳಲ್ಲಿ ಆನ್‌ಲೈನ್ ಬೆಟ್ಟಿಂಗ್‌ಗೆ ಸಂಬಂಧಿಸಿದಂತೆ ದಾಖಲಾದ ಪ್ರಕರಣಗಳ ಅಂಕಿ-ಅಂಶ ಈ ಕೆಳಗಿನಂತಿರುತ್ತದೆ:-<br><br>ಕ್ರಸ \| ವರ್ಷ \| ದಾಖಲಾದ ಪ್ರಕರಣಗಳ ಸಂಖ್ಯೆ<br>1 \| 2023 \| 415<br>2 \| 2024 \| 327<br>3 \| 2025 \| 451<br>\| **ಒಟ್ಟು** \| **1193**<br><br>ವರ್ಷಾವಾರು ವಿವರವನ್ನು ಅನುಬಂಧ ದಲ್ಲಿ ನೀಡಲಾಗಿದೆ. |
| ಇ) | ಯುವ ಜನತೆಗೆ ಮೃತ್ಯು ಪಾಶವಾಗಿ ಪರಿಣಮಿಸಿ, ಅವರನ್ನು ಮಾನಸಿಕ ಖಿನ್ನತೆಗೆ ದೂಡಿ ಆತ್ಮಹತ್ಯೆಗೆ ಪ್ರಚೋದಿಸುತ್ತಿರುವುದರ ಜೊತೆಗೆ ಸಾಮಾಜಿಕ ಸ್ವಾಸ್ಥ್ಯಕ್ಕೆ ಅತ್ಯಂತ ಮಾರಕ ಮತ್ತು ಕಂಟಕವಾಗಿ ಪರಿಣಮಿಸಿರುವ ಈ ಡೆಡ್ಲಿ ಆನ್ ಲೈನ್ ಬೆಟ್ಟಿಂಗ್‌ಗೆ ಅಂಕುಶ ಮತ್ತು ಕಡಿವಾಣ ಹಾಕಲು ಸರ್ಕಾರ ಇದುವರೆಗೆ ಏನು ಕ್ರಮವಹಿಸಿದೆ; | ಆನ್‌ಲೈನ್ ಬೆಟ್ಟಿಂಗ್ ನಿಯಂತ್ರಣದ ಸಲುವಾಗಿ ಕರ್ನಾಟಕ ಪೊಲೀಸ್ ಕಾಯ್ದೆ-(ತಿದ್ದುಪಡಿ) 2021ರಲ್ಲಿ ಸೆಕ್ಷನ್ 2ಕ್ಕೆ ತಿದ್ದುಪಡಿ ಮಾಡಿ ಸದರಿ ಕಾಯ್ದೆಯಲ್ಲಿ ಆನ್‌ಲೈನ್ ಅವಕಾಶದ ಆಟಗಳು ಮತ್ತು ಕೌಶಲ್ಯದ ಆನ್‌ಲೈನ್ ಆಟಗಳನ್ನು ಸೇರ್ಪಡೆ ಮಾಡಲಾಗಿರುತ್ತದೆ.<br><br>ಸರ್ಕಾರವು ಆನ್‌ಲೈನ್ ಆಟಗಳನ್ನು ನಿರ್ಬಂಧಿಸುವ ಸಂಬಂಧ ಕರ್ನಾಟಕ ಪೊಲೀಸ್ ಕಾಯ್ದೆ, 1963ರ ಕಲಂ 2, 78, 79, 80, 87, 114, 128ಎ ಹಾಗೂ 176ಗಳಿಗೆ ಕೆಲವು ತಿದ್ದುಪಡಿ ಮಾಡಲು ತೀರ್ಮಾನಿಸಿ, The Karnataka Police (Amendment) Act, 2000 (Central Act 21 of 2000) ರಲ್ಲಿನ ತಾಂತ್ರಿಕ ಅಂಶಗಳನ್ನು ಸೇರ್ಪಡೆಗೊಳಿಸಲಾಗಿತ್ತು. ಈ ಸಂಬಂಧ ಆನ್ ಲೈನ್ ಗೇಮ್ ಸಂಸ್ಥೆಗಳು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು ಇಲ್ಲಿ W.P. No. 18703/2021 (GM-Police) ದಾಖಲಿಸಲಾಗಿ, ಮಾನ್ಯ ಉಚ್ಚ ನ್ಯಾಯಾಲಯವು ಸರ್ಕಾರವು ಮಾಡಲಾಗಿದ್ದ ತಿದ್ದುಪಡಿ ಆದೇಶವನ್ನು ದಿನಾಂಕ : 14.02.2022ರಂದು ರದ್ದುಗೊಳಿಸಿರುತ್ತದೆ. ಮಾನ್ಯ ಉಚ್ಚ |

| | | |
|---|---|---|
| | | ನ್ಯಾಯಾಲಯದ ಆದೇಶವನ್ನು ಪ್ರಶ್ನಿಸಿ ಸರ್ಕಾರವು ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ಸಿವಿಲ್ ಅಪೀಲ್ ಸಂಖ್ಯೆ: 6132-6143/2023ರಲ್ಲಿ ಸಲ್ಲಿಸಿದ್ದು, ಪ್ರಕರಣವು ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ವಿಚಾರಣೆಗಾಗಿ ಬಾಕಿ ಉಳಿದಿರುತ್ತದೆ. |
| ಈ) | ಯುವ ಜನತೆಯನ್ನು ತೀವ್ರ ಮಾನಸಿಕ ಖಿನ್ನತೆಗೆ ದೂಡುತ್ತಿರುವ ಆನ್‌ಲೈನ್ ಬೆಟ್ಟಿಂಗ್‌ನ ಅಪಾಯಗಳ ಕುರಿತು ಅರಿವು ಮೂಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? | ಯುವಕರುಗಳು ಅನ್‌ಲೈನ್ ಬೆಟ್ಟಿಂಗ್ ಚಟುವಟಿಕೆಗಳಲ್ಲಿ ಭಾಗಿಯಾಗುವಂತೆ ಪ್ರಚೋದನೆ ಮಾಡುತ್ತಿರುವ ಅನ್‌ಲೈನ್ ಬೆಟ್ಟಿಂಗ್ (App) ಗಳಿಂದ ಪ್ರಚೋದನೆಗೆ ಒಳಪಟ್ಟು ಅಂತಹ ಬೆಟ್ಟಿಂಗ್ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಲ್ಲಿ ಉಂಟಾಗುವ ದುಷ್ಪರಿಣಾಮಗಳ ಬಗ್ಗೆ ಯುವಕರಲ್ಲಿ, ಶಾಲಾ-ಕಾಲೇಜು ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿರುತ್ತದೆ.<br><br>ಅಲ್ಲದೆ ಜಿಲ್ಲೆಯ ಹೋಟೆಲ್‌ಗಳಲ್ಲಿ, ಮಾಲ್‌ಗಳಲ್ಲಿ, ಶೋರೂಂ, ಶಾಪ್, ಕ್ಲಬ್ ಹಾಗೂ ಇನ್ನಿತರೆ ಮನೋರಂಜನಾ ಸ್ಥಳಗಳಲ್ಲಿ ಕೆಲಸ ಮಾಡುವ ಯುವಕರು ಕ್ರಿಕೆಟ್, ಕಬ್ಬಡಿ ಇನ್ನಿತರೆ ಅನ್‌ಲೈನ್ ಆಟಗಳ ಬೆಟ್ಟಿಂಗ್ ದಂಧೆಯಲ್ಲಿ ತೊಡಗುತ್ತಿರುವ ಬಗ್ಗೆ ಆಗಿಂದಾಗ್ಗೆ ಅನಿರೀಕ್ಷಿತ ಭೇಟಿ ನೀಡಿ ಪರಿಶೀಲಿಸಲಾಗುತ್ತಿದೆ. ಯಾವುದೇ ಅಕ್ರಮ ಚಟುವಟಿಕೆಗಳು ಕಂಡು ಬಂದಲ್ಲಿ ಸೂಕ್ತ ಕಾನೂನು ಕ್ರಮ ಜರುಗಿಸಲಾಗುವುದು.<br><br>ಆನ್ ಲೈನ್ ಗೇಮ್ಸ್ ಆಮಿಷಕ್ಕೆ ಒಳಗಾಗದಂತೆ ಅರಿವು ಮೂಡಿಸುವ ಕುರಿತು ಶಾಲಾ ಕಾಲೇಜು ವಿದ್ಯಾರ್ಥಿಗಳಿಗೆ, ಯುವಕರಿಗೆ, ಯುವಕರ ಸಭೆ ಮೂಲಕ ಹಾಗೂ ಸಾರ್ವಜನಿಕರಿಗೆ ಜಾಗೃತಾ ಕಾರ್ಯಕ್ರಮ ಕೈಗೊಂಡಿದ್ದು ಮತ್ತು ಅಂತಹ ಆನ್‌ಲೈನ್ ಆಟಗಳ ಬೆಟ್ಟಿಂಗ್ ದಂಧೆಯಲ್ಲಿ ತೊಡಗಿಕೊಳ್ಳುವವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುತ್ತಿದೆ.<br><br>ಹೋಟೆಲ್, ಮಾಲ್, ಶೋರೂಂ, ಶಾಪ್, ಕ್ಲಬ್ ಹಾಗೂ ಇನ್ನಿತರೆ ಮನೋರಂಜನಾ ಸ್ಥಳಗಳಲ್ಲಿ ಆನ್‌ಲೈನ್ ಗೇಮ್‌ನಲ್ಲಿ ತೊಡಗಿರುವ ವಿದ್ಯಾರ್ಥಿಗಳು ಹಾಗೂ ಇತರ ಸಾರ್ವಜನಿಕರನ್ನು ಪತ್ತೆ ಹಚ್ಚಲು ಶ್ರಮವಹಿಸಲಾಗುತ್ತಿದೆ. |

**ಸಂಖ್ಯೆ: ಹೆಚ್‌ಡಿ 417 ಎಸ್‌ಎಸ್‌ಟಿ 2025**

**(ಡಾ: ಜಿ. ಪರಮೇಶ್ವರ)**
**ಗೃಹ ಸಚಿವರು**

# ಅನುಬಂಧ

## ಅಕ್ರಮ ಬೆಟ್ಟಿಂಗ್‌ನಲ್ಲಿ ಭಾಗವಹಿಸಿದವರ ವಿರುದ್ಧ ದಾಖಲಾದ ಪ್ರಕರಣಗಳ ಅಂಕಿ-ಅಂಶ

| ಕ್ರಸ | ಜಿಲ್ಲೆ/ನಗರ | 2023 | 2024 | 2025 |
|---|---|---|---|---|
| 1. | ಬೆಂಗಳೂರು ನಗರ | 112 | 66 | 62 |
| 2. | ಮೈಸೂರು ನಗರ | 1 | 3 | 7 |
| 3. | ಹುಬ್ಬಳ್ಳಿ-ಧಾರವಾಡ ನಗರ | 144 | 73 | 120 |
| 4. | ಮಂಗಳೂರು ನಗರ | 4 | 2 | 0 |
| 5. | ಬೆಳಗಾವಿ ನಗರ | 1 | 1 | 1 |
| 6. | ಕಲಬುರಗಿ ನಗರ | 4 | 2 | 4 |
| 7. | ಬೆಂಗಳೂರು ಜಿಲ್ಲೆ | 5 | 3 | 1 |
| 8. | ತುಮಕೂರು ಜಿಲ್ಲೆ | 1 | 0 | 1 |
| 9. | ಕೋಲಾರ ಜಿಲ್ಲೆ | 2 | 20 | 26 |
| 10. | ರಾಮನಗರ ಜಿಲ್ಲೆ | 7 | 0 | 1 |
| 11. | ಚಿಕ್ಕಬಳ್ಳಾಪುರ ಜಿಲ್ಲೆ | 2 | 2 | 11 |
| 12. | ಕೆ.ಜಿ.ಎಫ್. | 2 | 1 | 0 |
| 13. | ಮೈಸೂರು ಜಿಲ್ಲೆ | 0 | 0 | 0 |
| 14. | ಮಂಡ್ಯ ಜಿಲ್ಲೆ | 0 | 2 | 3 |
| 15. | ಹಾಸನ ಜಿಲ್ಲೆ | 1 | 3 | 0 |
| 16. | ಕೊಡಗು | 0 | 0 | 0 |
| 17. | ಚಾಮರಾಜನಗರ ಜಿಲ್ಲೆ | 0 | 0 | 0 |
| 18. | ಬೆಳಗಾವಿ ಜಿಲ್ಲೆ | 16 | 10 | 7 |
| 19. | ವಿಜಯಾಪುರ ಜಿಲ್ಲೆ | 6 | 6 | 0 |
| 20. | ಧಾರವಾಡ ಜಿಲ್ಲೆ | 2 | 3 | 0 |
| 21. | ಬಾಗಲಕೋಟೆ ಜಿಲ್ಲೆ | 5 | 6 | 18 |
| 22. | ಗದಗ ಜಿಲ್ಲೆ | 14 | 22 | 37 |
| 23. | ಚಿತ್ರದುರ್ಗ ಜಿಲ್ಲೆ | 0 | 4 | 8 |
| 24. | ಹಾವೇರಿ ಜಿಲ್ಲೆ | 4 | 11 | 7 |
| 25. | ಶಿವಮೊಗ್ಗ ಜಿಲ್ಲೆ | 10 | 0 | 1 |
| 26. | ದಾವಣಗೆರೆ ಜಿಲ್ಲೆ | 10 | 8 | 11 |
| 27. | ದಕ್ಷಿಣ ಕನ್ನಡ ಜಿಲ್ಲೆ | 0 | 0 | 0 |
| 28. | ಉತ್ತರ ಕನ್ನಡ ಜಿಲ್ಲೆ | 1 | 5 | 2 |
| 29. | ಚಿಕ್ಕಮಗಳೂರು ಜಿಲ್ಲೆ | 1 | 1 | 1 |
| 30. | ಉಡುಪಿ ಜಿಲ್ಲೆ | 4 | 1 | 8 |
| 31. | ಬಳ್ಳಾರಿ ಜಿಲ್ಲೆ | 14 | 18 | 41 |
| 32. | ಕಲಬುರಗಿ ಜಿಲ್ಲೆ | 0 | 2 | 1 |
| 33. | ಬೀದರ್ ಜಿಲ್ಲೆ | 21 | 22 | 33 |
| 34. | ರಾಯಚೂರು ಜಿಲ್ಲೆ | 0 | 0 | 0 |
| 35. | ಕೊಪ್ಪಳ ಜಿಲ್ಲೆ | 0 | 0 | 0 |
| 36. | ಯಾದಗಿರಿ ಜಿಲ್ಲೆ | 2 | 0 | 4 |
| 37. | ವಿಜಯನಗರ ಜಿಲ್ಲೆ | 19 | 30 | 35 |
| | ಒಟ್ಟು | 415 | 327 | 451 |